ನಲ್ಲಿ 30 ಕೋಟಿ ರೂಪಾಯಿಯ ಪ್ರಾವಿಷನ್ ಮಾಡಿದ್ದೇವೆ. ಒಂದು ಅಡುಗೆ ಕೋಣೆಗೆ 40,000 ರೂಪಾಯಿ ವೆಚ್ಚ ಬಂದರೂ ಸಹ ಏಳು ಅಡುಗೆ ಕೋಣೆಗಳಾಗುತ್ತದೆ. ಇವೆಲ್ಲವನ್ನೂ ನಮ್ಮ ಶಿಕ್ಷಣ ಇಲಾಖೆಯಿಂದ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಜಿಲ್ಲಾ, ತಾಲ್ಲೂಕು ಪಂಚಾಯತ್ ಇವರೆಲ್ಲರೂ ಸಹಕಾರವನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಮೊನ್ನೆ ನಾನು ಮಂಗಳೂರಿಗೆ ಹೋಗಿದ್ದೇನು. ಉಡುಪಿಯಲ್ಲಿ ಜೆಡ್ ಪಿ, ಟಿಪಿ ಹಾಗೂ ನಗರಸಭೆಗಳಿಂದ ಕೂಡ ಎಲ್ಲಾ ಖರ್ಚನ್ನು ಭರಿಸಿದ್ದಾರೆ, ಇದೇ ರೀತಿ ಇಲ್ಲಿಯೂ ಕೂಡ ಜೆಡ್‌ಪಿ,ಟಿಪಿಗಳ ಸಹಕಾರ ದೊರೆತರೆ ನಮಗೂ ಕೂಡ ಸಹಾಯವಾಗುತ್ತದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2512

ಸದಸ್ಯರ ಹೆಸರು : ಶ್ರೀ ಹೆಚ್. ಹಾಲಪ್ಪ (ಹೊಸನಗರ)

ಉತ್ತರಿಸುವ ಸಚಿವರು : ಡಾ. ಹೆಚ್.ಸಿ. ಮಹದೇವಪ್ಪ(ಗ್ರಾಮಿಣಾಭಿವೃದ್ಧಿ ಪಂ.ರಾಜ್ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಹೊಸನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತೆರೆದ ಬಾವಿಗಳ ಸಂಖ್ಯೆ ಎಷ್ಟು;	1963 ತೆರೆದ ಬಾವಿಗಳನ್ನು ಹೊಸನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿಗಾಗಿ ತೋಡಲಾಗಿದೆ.
ಆ.	ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಿಂದ ತೆರೆದ ಬಾವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)?	1)ಜಿಲ್ಲಾ ಪಂಚಾಯತ್ ವತಿಯಿಂದ 1630 2) ತಾಲ್ಲೂಕು ಪಂಚಾಯತ್ ವತಿಯಿಂದ 300 ಮತ್ತು 3) ಗ್ರಾಮ ಪಂಚಾಯತ್ ವತಿಯಿಂದ 33 ತೆರೆದ ಬಾವಿಗಳನ್ನು ತೋಡಲಾಗಿದೆ.

ಶ್ರೀ ಹೆಚ್. ಹಾಲಪ್ಪ: ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹೊಸ ನಗರ ತಾಲೂಕಿನಲ್ಲಿ 29 ಗ್ರಾಮ ಪಂಚಾಯಿತಿಗಳಲ್ಲಿ 1963 ತೆರೆದ ಬಾವಿಗಳನ್ನು ತೋಡಿಸಲಾಗಿದೆಯೆಂದು ಹೇಳಿದ್ದಾರೆ. ಹಿಂದಿನ ಅಧಿವೇಶವನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದಾಗ 1052 ಬಾವಿಗಳನ್ನು ತೆಗೆಸಲಾಗಿದೆಯೆಂದು ಹೇಳಿದ್ದರು. ಈಗ 5–6 ತಿಂಗಳುಗಳಲ್ಲಿ 911 ಬಾವಿಗಳು ಎಲ್ಲಿಂದ ಬಂದವು. ಎಲ್ಲಿ ತೆಗೆದಿದ್ದಾರೆಂದು ನಮಗೆ ಗೊತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳನ್ನು ಹಿಂದಿನಿಂದ ನಾನು ಕೇಳುತ್ತ ಬಂದಿದ್ದೇನೆ. ಎರಡು ಸಾವಿರ ತೆರೆದ ಬಾವಿಗಳನ್ನು ತೆಗೆದಿದ್ದಾರೆ, ಅದಲ್ಲದೆ ಕೊಳವೆಬಾವಿಗಳು ತೆಗೆದಿದ್ದಾರೆ, ಆದರೆ ಈ ಬಾವಿಗಳು ಎಲ್ಲಿವೆಯೆಂಬುವರ ಬಗ್ಗೆ ಅದರ ವಿಳಾಸವೇ ನಮಗೆ ತಿಳಿಯುತ್ತಿಲ್ಲ. ನಾನು ಅನೇಕ ಸಾರಿ ಸಂಬಂಧಿತ ಅಧಿಕಾರಿಗಳನ್ನು ಈ ಬಗ್ಗೆ ಮಾಹಿತಿ ನೀಡುವಂತೆ ಕೇಳಿದರೂ ಸಹ ಮಾಹಿತಿಯನ್ನು ನೀಡುತ್ತಿಲ್ಲ. ನಮ್ಮ ಹೊಸನಗರ ತಾಲೂಕಿನ 29 ಗ್ರಾಮಪಂಚಾಯಿತಿಗಳಲ್ಲಿ ಎರಡು ಸಾವಿರ ತೆರೆದ ಬಾವಿಗಳು ಇದೆಯೇ? ಅಥವಾ ಇಲ್ಲವೇ? ಈ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಆ ಬಾವಿಗಳೂ ಎಲ್ಲೆಲ್ಲಿ ತೆಗೆಸಿದ್ದಾರೆಂದು ತಿಳಿದು ಅದರ ಸೌಕರ್ಯ ಜನಗಳಿಗೆ ಒದಗಿಸುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಜನಗಳಿಗೆ ಆ ಬಾವಿಗಳು ಏನಾದರೂ ಕಳೆದುಹೋಗಿದೆಯೇನೋ ಎಂಬ ಭಾವನೆ ಬಂದು ಬಿಟ್ಟಿದೆ, ಹಾಗಾಗಿ ದಯಮಾಡಿ ಮಾಹಿತಿಯನ್ನು ಕೊಟ್ಟರೆ ಬಾವಿಗಳು ಇದೆಯೇ? ಇಲ್ಲವೆ? ಎಂದು ನಾವು ಹುಡುಕುತ್ತೇವೆ.

ಡಾ. ಹೆಚ್.ಸಿ. ಮಹದೇವಪ್ಪ: ಯಾವ್ಯಾವ ಪಂಚಾಯತ್‌ಗಳಲ್ಲಿ ಎಷ್ಟೆಷ್ಟು ಬಾವಿಗಳನ್ನು ತೆಗೆಸಲಾಗಿದೆಯೆಂಬ ಬಗ್ಗೆ ವಿವರವಾಗಿ ಮಾಹಿತಿಯನ್ನು ಒದಗಿಸುತ್ತೇನೆ. ಈಗ ಅವರು ಕೇಳಿರುವ ಪ್ರಶ್ನೆಗೆ ಅಂದರೆ ಹೊಸನಗರ ತಾಲೂಕಿನಲ್ಲಿ ಎಷ್ಟು ಕುಡಿಯುವ ನೀರಿನ ಬಾವಿಗಳಿವೆ ಎಂಬುದಕ್ಕೆ ಹಾಗೂ ಗ್ರಾಮ ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ಎಷ್ಟು ತೆರೆದ ಬಾವಿಗಳನ್ನು ತೆಗೆಯಲಾಗಿದೆಯೆಂದು ಕೇಳಿರುತ್ತಾರೆ. ಅವರ ಪ್ರಶ್ನೆಗೆ ಉತ್ತರದಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ: (1) ಜಿಲ್ಲಾ ಪಂಚಾಯತ್–1630 (2) ತಾಲೂಕು ಪಂಚಾಯತ್–300 (3) ಗ್ರಾಮ ಪಂಚಾಯತಿ–33 ಬಾವಿಗಳನ್ನು ತೆಗೆಸಲಾಗಿದೆಯೆಂದು ಉತ್ತರದಲ್ಲಿ ತಿಳಿಸಲಾಗಿದೆ. ಪಂಚಾಯತ್ ವಾರು ವಿವರವನ್ನು

ಶ್ರೀ ಹೆಚ್. ಹಾಲಪ್ಪ: ಹೊಸನಗರ ತಾಲೂಕಿನಲ್ಲಿ ಎರಡು ಸಾವಿರ ಬಾವಿಗಳು ಇದೆಯೇ ಎಂಬ ಅನುಮಾನ ಜನರಿಗೆ ಹಾಗೂ ನನಗೆ ಬಂದಿದೆ. ಹಾಗಾಗಿ ಆ ಬಾವಿಗಳು ಇದ್ದರೆ ಎಲ್ಲೆಲ್ಲಿ ಇವೆಯೆಂದು ವಿಳಾಸವನ್ನು ಕೊಟ್ಟರೆ ಆ ಬಾವಿಗಳನ್ನು ಪತ್ತೆ ಹಚ್ಚಬಹುದು.

ಡಾ. ಹೆಚ್.ಸಿ. ಮಹದೇವಪ್ಪ: ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಭಾಗಗಳಲ್ಲಿ ಸಾಮಾನ್ಯವಾಗಿ ತೆರೆದ ಬಾವಿಗಳನ್ನು ತೆಗೆಯುತ್ತಾರೆ. ಹೊಸನಗರದಲ್ಲಂತೂ ಲಿಂಗನಮಕ್ಕಿ ಬ್ಯಾಕ್ ವಾಟರ್ ಬರುವುದರಿಂದ ನೀರು ಮೇಲ್ಮಟ್ಟದಲ್ಲಿ ಸಿಗುತ್ತದೆ, ಹಾಗಾಗಿ ಅವರೆಲ್ಲಾ ತೆರೆದ ಬಾವಿಗಳನ್ನು ತೆಗೆದಿರುತ್ತಾರೆ. ಹೊಸನಗರದಲ್ಲಿ ಯಾವ ಯಾವ ಭಾಗದಲ್ಲಿ ತೆರೆದ ಬಾವಿಗಳಿವೆ ಎಂಬ ಬಗ್ಗೆ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನಾನು ಒದಗಿಸುತ್ತೇನೆ.

ಶ್ರೀ ಹೆಚ್. ಹಾಲಪ್ಪ: ಗ್ರಾಮ ಪಂಚಾಯಿತಿಗಳಿಂದ ಬರೇ 33 ಬಾವಿಗಳನ್ನು ತೆಗೆಯಲಾಗಿದೆಯೆಂದು ಹೇಳಿದ್ದೀರಿ. ನಮ್ಮ ಊರಿನ ಹರತಾಳು ಗ್ರಾಮ ಪಂಚಾಯಿತಿಗಳಲ್ಲೇ 5 ಬಾವಿಗಳನ್ನು ತೆಗೆಸಿದ್ದಾರೆ. 'ಹುಂಚ' ಎನ್ನುವ ಗ್ರಾಮ ಪಂಚಾಯ್ತಿಗಳಲ್ಲಿ 13 ಬಾವಿಗಳನ್ನು ತೆಗೆಸಿದ್ದಾರೆ. ಸದ್ಯಕ್ಕೆ ಬೇರೆ ಬೇರೆ ಅನುದಾನದಲ್ಲಿ ನಮ್ಮ 29 ಗ್ರಾಮ ಪಂಚಾಯಿತಿಗಳಲ್ಲಿ ಹತ್ತತ್ತು ಬಾವಿಗಳಂತೂ ಇದ್ದೇ ಇದೆ ಸುಮಾರು ಒಟ್ಟಾರೆ ಸೇರಿ 200ಕ್ಕಿಂತ ಹೆಚ್ಚು ಇರಬಹುದು, ಹಾಗಾಗಿ ಈ ಉತ್ತರ ಅಷ್ಟು ಸಮರ್ಪಕವಾಗಿಲ್ಲವೆಂದು ನನ್ನ ಅನಿಸಿಕೆ, 33 ಗ್ರಾಮ ಪಂಚಾಯ್ತಿಗಳಿಗೆ 33 ಬಾವಿಗಳನ್ನಷ್ಟೇ ತಾವು ತೆಗೆಸಿರುವಿರಾ?

ಡಾ. ಹೆಚ್. ಸಿ. ಮಹದೇವಪ್ಪ: ಒಟ್ಟು 1963 ಬಾವಿಗಳನ್ನು ತೆಗೆಸಲಾಗಿದೆ, ಅದರಲ್ಲಿ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿಗಳವಾರು, ಅಧಿಕಾರ ವಿಕೇಂದ್ರೀಕರಣದ ಸಂಸ್ಥೆಗಳಿಗಾಗಿ ತೆಗೆದಿರುವ ಬಾವಿಗಳ ಬಗ್ಗೆ ವಿವರವನ್ನು ನೀಡಲಾಗಿದೆ. ಗ್ರಾಮ ಹಾಗೂ ಪಂಚಾಯತ್ ವಾರು ಇನ್ನೂ ವಿವರವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಸದನ ಮುಗಿದ ನಂತರ ಒದಗಿಸಿಕೊಡುತ್ತೇನೆ.

ಶ್ರೀ ಹೆಚ್. ಹಾಲಪ್ಪ: ಗ್ರಾಮ ಪಂಚಾಯ್ತಿಗೆ ಹಾಗೂ ತಾಲೂಕು ಪಂಚಾಯ್ತಿಗೂ ಕೂಡ ಒಂದೇ ಬಾವಿಯನ್ನು ತೆಗೆಸುವುದು, ಜಿಲ್ಲಾ ಪಂಚಾಯತ್‌ನಲ್ಲೂ ಒಂದೇ ಬಾವಿಯನ್ನು ತೆಗೆಸುವುದು, ಮೂರು ಜನ ಸೇರಿ ಒಂದೇ ಬಾವಿಯನ್ನು ತೆಗೆಸಿದ್ದಾರೆಂದು ನನ್ನ ಅಭಿಪ್ರಾಯವಾಗಿದೆ. ಹಾಗೂ ಜನರ ಅಭಿಪ್ರಾಯವೂ ಸಹ ಇರುವುದರಿಂದ ದಯಮಾಡಿ ಈ ಬಗ್ಗೆ ಮಾಹಿತಿಯನ್ನು ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ರೀತಿ ಮಾಡುವುದೇ ಅಧಿಕಾರ ವಿಕೇಂದ್ರೀಕರಣ ಎನಿಸುತ್ತದೆ.

ಶ್ರೀ ಹೆಚ್. ಹಾಲಪ್ಪ: ಇರಬಹುದು, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೇ ಅದೇ ವಿಕೇಂದ್ರೀಕರಣ ಇರಬಹುದು.

ಡಾ. ಹೆಚ್.ಸಿ. ಮಹದೇವಪ್ಪ: ಒಂದು ವೇಳೆ ಆ ರೀತಿಯಾಗಿ ನಮ್ಮ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ, ಆ ಕುರಿತು ತಮ್ಮಲ್ಲಿರುವ ವಿವರಗಳನ್ನು ಕೊಡಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಒಂದೇ ಬೋರ್‌ವೆಲ್‌ಗಾಗಿ ಮೂರು ಕಡೆ ಹಣವನ್ನು ಡ್ರಾ ಮಾಡಿರುವ ಸಾಧ್ಯತೆಯಿದೆ, ಅಥವಾ ಬೋರ್ ವೆಲ್ ಅನ್ನು ಕದ್ದುಕೊಂಡು ಹೋಗಿರಬಹುದು.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಸದಸ್ಯರ ಬಳಿ ಆ ರೀತಿಯ ಮಾಹಿತಿ ಇದ್ದರೆ ನಮಗೆ ನೀಡಲಿ ಅಥವಾ ನಮಗೆ ತಿಳಿಸಿದರೂ ಸಹ ನಾವು ಅದನ್ನು ವೆರಿಫೈ ಮಾಡಿ ಅವರ ವಿರುದ್ಧ ಸರಿಯಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ: 3682
ವಿಧಾನ ಸಭಾ ಸದಸ್ಯರು : ಶ್ರೀ ಆರ್. ಧ್ರುವನಾರಾಯಣ
ಉತ್ತರಿಸುವವರು : ಎನ್. ಚೆಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ	ಉತ್ತರ
1. ಸಂತೇಮರಹಳ್ಳಿ ಕ್ಷೇತ್ರದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹಾಗೂ ಶುಶ್ರೂಷಕಿಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸಂತೇಮರಹಳ್ಳಿ ಕ್ಷೇತ್ರದಲ್ಲಿನ ಪ್ರಾತಮಿಕ ಆರೋಗ್ಯ ಕೇಂದ್ರಗಳಲ್ಲಿ 9 ವೈದ್ಯರ ಹುದ್ದೆ ಮಂಜೂರಾಗಿದ್ದು, 8 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದು, ಒಂದು ವೈದ್ಯರ ಹುದ್ದೆ ಖಾಲಿ ಇರುತ್ತದೆ ಹಾಗು ಶುಶ್ರೂಷಕಿಯರ 3 ಹುದ್ದೆಗಳೂ ಮಂಜೂರಾಗಿದ್ದು, ಎಲ್ಲಾ ಹುದ್ದೆಗಳು ಭರ್ತಿಯಾಗಿವೆ.
2. ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?	ಖಾಲಿ ಇರುವ ಒಂದು ವೈದಯಾಧಿಕರಿಯ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.